# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ನಿಗಮ ಕಾರ್ಯಾಲಯ
ಜೆಸ್ಕಾಂ ಕಲಬುರಗಿ

ಸಂಖ್ಯೆ: ಜೆಸ್ಕಾಂ/ಪ್ರ.ವ್ಯ/ಉ.ಲೆ.ನಿ (ಮಾ.ಸಂ.ಅ)/ಕಾನಿ೩(ವಿ)/ಐ.ಟಿ.ಸಿ./ಜಿ-11-1304/2017-18/ 6H838    ದಿನಾಂಕ : -6 MAR 2018

## ಪ್ರಕಟಣೆ

ರಾಷ್ಟ್ರೀಯ ಶಿಶಿಕ್ಷು (ಅಪ್ರೆಂಟಿಸ್) ತರಬೇತಿ ಯೋಜನೆಯಡಿ (NCVT) ಪ್ರಮಾಣ ಪತ್ರ ಪಡೆದವರಿಗೆ ಒಂದು ವರ್ಷದ ಅವಧಿಯ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಹಾಗೂ (SCVT) ರಾಜ್ಯ ವೃತ್ತಿ ಪ್ರಮಾಣ ಪತ್ರ/ಅಂಕಪಟ್ಟಿ ಪಡೆದವರಿಗೆ 1 ವರ್ಷ ಮೂರು ತಿಂಗಳು ಅವಧಿಯ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಅರ್ಹ ಶಿಶಿಕ್ಷು ಅಭ್ಯರ್ಥಿಗಳಿಂದ 2017-18 ನೇ ಸಾಲಿನ ಆಯ್ಕೆಯ ಬಗ್ಗೆ ಪ್ರಕಟಣೆ.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕೈಗಾರಿಕ ತರಬೇತಿ ಕೇಂದ್ರ, ಕಲಬುರಗಿ, ಇಲ್ಲಿ ನಡೆಸುವ 2017-18ನೇ ಸಾಲಿನ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

1. **ಅಭ್ಯರ್ಥಿ ವಯಸ್ಸು:** ದಿನಾಂಕ: 19.03.2018 ಕ್ಕೆ 16 ವರ್ಷ ಮೇಲ್ಪಟ್ಟು ಮತ್ತು 40 ವರ್ಷ ಮೀರಿರಬಾರದು.
2. **ಅಭ್ಯರ್ಥಿಯ ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ. ನಂತರ ಎರಡು ವರ್ಷ ಅವಧಿಯ ಐ.ಟಿ.ಐ. ತರಬೇತಿ ಹೊಂದಿ. ಕುಶಲಕರ್ಮಿ ತರಬೇತಿ ಯೋಜನೆಯಡಿ ನಡೆಸುವ ವೃತ್ತಿ ಪರೀಕ್ಷೆಯ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ತೇರ್ಗಡೆಯಾಗಿ, ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ (NCVT) ರಾಜ್ಯ ವೃತ್ತಿ ಪ್ರಮಾಣ ಪತ್ರ (SCVT) ಅಂಕಪಟ್ಟಿ ಹೊಂದಿರುವ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.
3. **ಶಿಶಿಕ್ಷು ವೇತನ:**
   ಅ) ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ ಪಡೆದ ಅಭ್ಯಾರ್ಥಿಗಳಿಗೆ (NCVT) ಒಂದು ವರ್ಷದ ತರಬೇತಿ ಅವಧಿ: ಮಾಸಿಕ ರೂ. 6520/-
   ಆ) ರಾಜ್ಯ ವೃತ್ತಿ ಪ್ರಮಾಣ ಪತ್ರ ಪಡೆದ ಅಭ್ಯರ್ಥಿಗಳಿಗೆ (SCVT) ಒಂದು ವರ್ಷ ಮೂರು ತಿಂಗಳು ತರಬೇತಿ ಅವಧಿ: ಮೊದಲನೇ ವರ್ಷ : ಮಾಸಿಕ ರೂ. 6520/-
4. **ಇತರೆ ಅರ್ಹತಾ ಮಾನದಂಡಗಳು:**
   - ಅಭ್ಯರ್ಥಿಗಳು ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.
   - ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಮೊದಲು ಅದ್ಯತೆ ನೀಡಲಾಗುವುದು.
   - ಆರೋಗ್ಯವಂತ ದೃಢಕಾಯ ಅಭ್ಯರ್ಥಿಗಳಿಗೆ ಮೊದಲು ಆದ್ಯತೆ ನೀಡಲಾಗುವುದು.
   - ಅಂಗವಿಕಲರು ಅರ್ಜಿಯನ್ನು ಸಲ್ಲಿಸಲು ಅರ್ಹರಿರುವುದಿಲ್ಲ.
   - ಒಂದು ಸಲ ವೃತ್ತಿ ತರಬೇತಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಗೆ ಪುನಃ ಅವಕಾಶವಿರುವುದಿಲ್ಲ.
   - ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಕಲಬುರಗಿನಲ್ಲಿ ಊಟ/ವಸತಿ ಹಾಗೂ ಇತರ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳತಕ್ಕದ್ದು.
   - ತರಬೇತಿಯ ಅವಧಿಯಲ್ಲಿ ತರಬೇತಿ ಸಂಸ್ಥೆಯ ನಿಯಮ/ಶಿಸ್ತು ಪಾಲಿಸತಕ್ಕದ್ದು.
5. **ಅರ್ಜಿ ಸಲ್ಲಿಸುವ ವಿಧಾನ:**
   - ಪೂರ್ಣ ವಿವರವಿರುವ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ಅರ್ಜಿಗಳನ್ನು ಕೆಳಗೆ ಕಾಣಿಸಿರುವ ಅರ್ಜಿ ನಮೂನೆಯಂತೆ ಎಲ್ಲಾ ದಾಖಲೆಗಳೊಂದಿಗೆ "ಪ್ರಧಾನ ವ್ಯವಸ್ಥಾಪಕರು, (ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ, (ಜೆಸ್ಕಾಂ) ಕಲಬುರಗಿ ರವರಿಗೆ ಸಲ್ಲಿಸತಕ್ಕದ್ದು.

- ಅರ್ಜಿ0ಯೊಂದಿಗೆ ಸಾಮಾನ್ಯ ಮತ್ತು ಪ್ರವರ್ಗI, IIಎ, IIಬಿ, IIIಎ, IIIಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ರೂ. 100/-(ಒಂದುನೂರು ರೂಪಾಯಿ ಮಾತ್ರ) ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರ್ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ರೂ. 50/- (ಐವತ್ತು ರೂಪಾಯಿ ಮಾತ್ರ) ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರನ್ನು "ಆರ್ಥಿಕ ಸಲಹೆಗಾರರು, ಗುಲಬರ್ಗಾ, ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಕಲಬುರಗಿ" ಇವರ ಹೆಸರಿನಲ್ಲಿ ಮಾತ್ರ 07.03.2018 ರಿಂದ 19.03.2018 ರವರೆಗೆ ಖರೀದಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು.
- ಅರ್ಜಿ ಕಳುಹಿಸುವ ಲಕೋಟೆಯ ಮೇಲೆ 2017-18ನೇ ಸಾಲಿನ ಶಿಶಿಕ್ಷು ಆಯ್ಕೆಗೆ ಅರ್ಜಿ ಎಂದು ಸ್ಪಷ್ಟವಾಗಿ ಬರೆದಿರಬೇಕು.

**6. ಅರ್ಜಿಯೊಂದಿಗೆ ಲಗತ್ತಿಸುವ ದಾಖಲೆಗಳು.**

- ಮೇಲೆ ತಿಳಿಸಿರುವಂತೆ ಇಂಡಿಯನ್ ಪೋಸ್ಟಲ್ ಆರ್ಡರ್
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಎಸ್.ಎಸ್.ಎಲ್. ಸಿ. ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಕುಶಲಕರ್ಮಿ ಎಲೆಕ್ಟ್ರೀಷಿಯನ್ ವೃತ್ತಿ ಪರೀಕ್ಷೆಯ ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳು (ಜೆರಾಕ್ಸ್ ಪ್ರತಿ)
- ಸರ್ಕಾರಿ ಆಸ್ಪತ್ರೆಯ ವೈದ್ಯಕೀಯ ಪ್ರಮಾಣ ಪತ್ರ (ಫಿಜಿಕಲ್ ಪಿಟನೇಸ್ ಸರ್ಟಿಫಿಕೇಟ) (ಜೆರಾಕ್ಸ್ ಪ್ರತಿ) ದಿನಾಂಕ: 19.10.2017 ರಿಂದ ಇತ್ತೀಚಿಗೆ ಪಡೆದಿದ್ದು.
- ಗಣ್ಯವ್ಯಕ್ತಿ/ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ಎರಡು ನಡೆತೆ ಪ್ರಮಾಣ ಪತ್ರ (ಜೆರಾಕ್ಸ್ ಪ್ರತಿ) ದಿನಾಂಕ: 19.10.2017 ರಿಂದ ಇತ್ತೀಚಿಗೆ ಪಡೆದಿದ್ದು.
- ಇತ್ತೀಚಿನ ಮೂರು ಭಾವಚಿತ್ರ (ಪಾಸ್ ಪೋರ್ಟ ಸೈಜಿನದು) ಇದರಲ್ಲಿ ಒಂದನ್ನು ಅರ್ಜಿಗೆ ಅಂಟಿಸುವದು.
- ಸ್ವ-ವಿಳಾಸವಿರುವ ರೂ.15/-ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿದ 4X9 ಇಂಚು ಅಳತೆಯ ಒಂದು ಲಕೋಟೆ.
- ಅಭ್ಯರ್ಥಿಗಳು ತರಬೇತಿ ಹೊಂದಿದ ಐ.ಟಿ.ಐ/ಐ.ಟಿ.ಸಿ. ಸಂಸ್ಥೆಯ, ಎನ್.ಸಿ.ವಿ.ಟಿ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರದ (ಜೆರಾಕ್ಸ್ ಪ್ರತಿಯನ್ನು) ತರಬೇತಿ ಸಂಸ್ಥೆಯಿಂದ ಪಡೆದು ಸಲ್ಲಿಸುವುದು.
- 371 (ಜೆ) ಕಾಯ್ದೆ ಅಡಿ0ಯಲ್ಲಿ ಬರುವ ಅಭ್ಯರ್ಥಿಗಳು ಸಂಬಂಧ ಪಟ್ಟ ಅಧಿಕಾರಿಗಳಿಂದ ನೀಡಿದ ಪ್ರಮಾಣ ಪತ್ರದ ಪ್ರತಿ0ಯನ್ನು ತಪ್ಪದೆ ಲಗತ್ತಿಸುವದು. ಇದಕ್ಕೆ ತಪ್ಪಿದಲ್ಲಿ ಇಂಥ ಅರ್ಜಿಗಳನ್ನು ಹೈದ್ರಾಬಾದ ಕರ್ನಾಟಕ ಪ್ರದೇಶದ ವ್ಯಾಪ್ತಿ0ಯಲ್ಲಿ ಬರುವದಿಲ್ಲವೆಂದು ಪರಿಗಣಿಸಲಾಗುವದು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-** ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ಲಗತ್ತಿನೊಡನೆ ದಿನಾಂಕ: 07.03.2018 ರಿಂದ 19.03.2018. ಸಾಯಿಂಕಾಲ 5.00 ಗಂಟೆಯೊಳಗೆ ನೇರವಾಗಿ ಅಥವಾ ಅಂಚೆಯ ಮೂಲಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಸ್ಟೇಷನ್ ರೋಡ್ ಕಲಬುರಗಿ, 585-102 ಇವರಿಗೆ ತಲುಪುವಂತೆ ಕಳುಹಿಸತಕ್ಕದ್ದು.
- ದಿನಾಂಕ : 19.03.2018 ರ ಸಾಯಿಂಕಾಲ 5:00 ಗಂಟೆ ನಂತರ ಬರುವ/ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ.
- ಪೂರ್ಣ ವಿವರ ಮತ್ತು ದಾಖಲೆಗಳಿಲ್ಲದ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಯಾವುದೇ ಕಾರಣಕ್ಕೂ ಪೋಸ್ಟಲ್ ಆರ್ಡರಗಳನ್ನು ಹಿಂತಿರುಗಿಸಲಾಗುವುದಿಲ್ಲ.
- ಶಿಫಾರಸ್ಸು ತರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.
- ಒಟ್ಟು ಆಯ್ಕೆ :ಐಟಿಐ/ಐಟಿಸಿ (ಎಲೆಕ್ಟ್ರೀಷಿಯನ್ ವೃತ್ತಿ) 0ಯಲ್ಲಿ ಗರಿಷ್ಟ ಅಂಕಗಳ ಆಧಾರದ ಮೇಲೆ ಮೀಸಲಾತಿ ರೋಸ್ಟರ ಪ್ರಕಾರ 470 ಶಿಶಿಕ್ಷುಗಳನ್ನು ಆ0ಯ್ಕೆ ಮಾಡಿಕೊಳ್ಳಲಾಗುವದು.

- (ಅ) ಹೈದ್ರಾಬಾದ ಕರ್ನಾಟಕ ಪ್ರದೇಶ ನಿಯಂತ್ರಣ ಆದೇಶ ಕಾಯ್ದೆ ಕ್ರ.ಸಂ. 371 (ಜೆ) ಅಡಿಯಲ್ಲಿ ಬರುವ ಅಭ್ಯರ್ಥಿಗಳನ್ನು ಶಿಶಿಕ್ಷು ತರಬೇತಿಗೆ ಆಯ್ಕೆ ಪಟ್ಟಿ.

| ಸಮತಲ ಮೀಸಲಾತಿ | ಸಾ.ಅ | ಪಜಾ | ಪಪಂ | ಸಿ.1 | ಸಿ.2ಎ | ಸಿ.2ಬಿ | ಸಿ.3ಎ | ಸಿ.3ಬಿ | ಒಟ್ಟು |
|---|---|---|---|---|---|---|---|---|---|
| ಪುರುಷ ಅಭ್ಯರ್ಥಿ | 65 | 20 | 05 | 06 | 20 | 06 | 06 | 07 | 135 |
| ಮಹಿಳಾ ಅಭ್ಯರ್ಥಿ | 62 | 18 | 04 | 05 | 18 | 05 | 05 | 06 | 123 |
| ಕನ್ನಡ ಮಾಧ್ಯಮ ಅಭ್ಯರ್ಥಿ | 28 | 08 | 02 | 2 | 08 | 2 | 2 | 03 | 55 |
| ಯೋಜನೆ ನಿರಾಶ್ರಿತಗೊಂಡ ಅಭ್ಯರ್ಥಿ | 06 | 02 | – | – | 02 | – | – | – | 10 |
| ಗ್ರಾಮೀಣ ಅಭ್ಯರ್ಥಿ | 28 | 08 | – | 02 | 08 | 02 | 02 | 03 | 53 |
| **ಒಟ್ಟು** | **189** | **56** | 11 | **15** | **56** | **15** | **15** | **19** | **376** |

- (ಬ) ಹೈದ್ರಾಬಾದ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿನ ಅಭ್ಯರ್ಥಿಗಳನ್ನು ಹೊರತು ಪಡಿಸಿ ಬೇರೆ ಪ್ರದೇಶದ ಅಭ್ಯರ್ಥಿಗಳ ಆಯ್ಕೆ ಪಟ್ಟಿ.

| ಸಮತಲ ಮೀಸಲಾತಿ | ಸಾ.ಅ | ಪಜಾ | ಪಪಂ | ಸಿ.1 | ಸಿ.2ಎ | ಸಿ.2ಬಿ | ಸಿ.3ಎ | ಸಿ.3ಬಿ | ಒಟ್ಟು |
|---|---|---|---|---|---|---|---|---|---|
| ಪುರುಷ ಅಭ್ಯರ್ಥಿ | 16 | 06 | 01 | 01 | 06 | 01 | 01 | 01 | **33** |
| ಮಹಿಳಾ ಅಭ್ಯರ್ಥಿ | 16 | 04 | 01 | 01 | 04 | 01 | 01 | 02 | **30** |
| ಕನ್ನಡ ಮಾಧ್ಯಮ ಅಭ್ಯರ್ಥಿ | 07 | 02 | – | 01 | 02 | 01 | 01 | 01 | **15** |
| ಯೋಜನೆ ನಿರಾಶ್ರಿತಗೊಂಡ ಅಭ್ಯರ್ಥಿ | 01 | – | – | – | – | – | – | – | **01** |
| ಗ್ರಾಮೀಣ ಅಭ್ಯರ್ಥಿ | 07 | 02 | – | 01 | 02 | 01 | 01 | 01 | **15** |
| **ಒಟ್ಟು** | **47** | **14** | **02** | **04** | **14** | **04** | **04** | **05** | **94** |

- ಶಿಶಿಕ್ಷುಗಳಿಗೆ ತರಬೇತಿ ಪೂರ್ಣಗೊಂಡ ನಂತರ ಉದ್ಯೋಗ ನೀಡಬೇಕೆಂದು ಗುವಿಸಕಂನಿ,ಗೆ ಯಾವುದೇ ಭಾದ್ಯತೆ ಇರುವುದಿಲ್ಲ. ಹಾಗೂ ಉದ್ಯೋಗ ಖಾತರಿಗಾಗಿ ಹಕ್ಕೋತ್ತಾಯ ಮಾಡಲು ಬರುವುದಿಲ್ಲ.

6/3/16

ಪ್ರಧಾನ ವ್ಯವಸ್ಥಾಪಕರು
(ಆ.ಮತ್ತು ಮಾ.ಸಂ.ಅ)
ಗು.ವಿ.ಸ.ಕಂ.ನಿ., ಕಲಬುರಗಿ

**ಪ್ರತಿಗಳು :**

1. ಕಾರ್ಯನಿರ್ವಾಹಕ ಇಂಜಿನಿಯರ (ವಿ), ವಾಣಿಜ್ಯ ಶಾಖೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿರವರಿಗೆ ಅಂತರ ಜಾಲದಲ್ಲಿ (website) www.gescom.in ಪ್ರಕಟಣೆಗಾಗಿ.
2. ಅಧೀಕ್ಷಕ ಇಂಜಿನಿಯರ (ವಿ), ಎಮ್.ಐ.ಎಸ್. ನಿಗಮ ಕಛೇರಿ ಗುವಿಸಕಂನಿ, ಕಲಬುರಗಿ ರವರಿಗೆ ಎರಡು ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ

# ಅರ್ಜಿ ನಮೂನೆ

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗುವಿಸಕಂನಿ., ಮಾ.ಸಂ.ಅ, ಕೇಂದ್ರ ಕಲಬುರಗಿಯಲ್ಲಿಯ

ಶಿಶುಕ್ಷು ತರಬೇತಿಗಾಗಿ ಅರ್ಜಿ

ಭಾವಚಿತ್ರ

1) ಇಂಡಿಯನ್ ಪೋಸ್ಟಲ್‌ಆರ್ಡರ್ ಸಂಖ್ಯೆ ______________

ದಿನಾಂಕ ______________

ರೂಪಾಯಿ ______________

2) ಅಭ್ಯರ್ಥಿಯ ಹೆಸರು : ______________________

3) ತಂದೆ/ತಾಯಿ/ಪೋಷಕರ ಹೆಸರು: ________________

4) ಲಿಂಗ : (ಪುರುಷ/ಮಹಿಳೆ) ________________

5) ಹುಟ್ಟಿದ ದಿನಾಂಕ : (ಎಸ್,ಎಸ್,ಎಲ್.ಸಿ. ಅಂಕಪಟ್ಟಿಯಲ್ಲಿಇರುವಂತೆ) ___________

6) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರೇ, ಹೌದಾದರೆ ಪ್ರಮಾಣ ಪತ್ರ ಲಗತ್ತಿಸುವದು _______

7) ಇತರೆ ಹಿಂದುಳಿದ ವರ್ಗಗಳಿಗೆ (ಪ್ರವರ್ಗ.I, IIಎ, IIಬಿ, IIIಎ, IIIಬಿ ಮತ್ತು ಸಾ.ಅ)

8) ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ : ________________________________

________________________________

________________________________

9) ವಿದ್ಯಾರ್ಹತೆ : ( ಐ.ಟಿ.ಐ. ನಲ್ಲಿಗಳಿಸಿದ)

ಗರಿಷ್ಠ ಅಂಕಗಳು:________________

ಪಡೆದ ಅಂಕಗಳು: ________________

ಶೇಕಡಾವಾರು ಅಂಕಗಳು ______________________________

10) ಲಗತ್ತು :

1) ಇಂಡಿಯನ್ ಪೋಸ್ಟಲ್ ಆರ್ಡರ್

2) ದೃಢೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರದ (ಟಿ.ಸಿ.) ಛಾಯ ಪ್ರತಿಯನ್ನು (ಝರಾಕ್ಸ್) ಲಗತ್ತಿಸುವದು.

3) ಕುಶಲಕರ್ಮಿ ಎಲೆಕ್ಟ್ರೀಷಿಯನ್ ವೃತ್ತಿ ಪರೀಕ್ಷೆಯ ಅಂಕಪಟ್ಟಿ

4) ಜಾತಿ ಪ್ರಮಾಣಪತ್ರ

5) ವೈದ್ಯಕೀಯ ಪ್ರಮಾಣಪತ್ರ (ಆರು ತಿಂಗಳೊಳಗೆ ದೃಢೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯಕೀಯ ಯೋಗ್ಯತಾ ಪ್ರಮಾಣ ಪತ್ರದ ಛಾಯಾ ಪ್ರತಿಯನ್ನು (ಝರಾಕ್ಸ್) ಲಗತ್ತಿಸಬೇಕು.

6) ನಡತೆ ಪ್ರಮಾಣ ಪತ್ರ (ಇಬ್ಬರು ಗಣ್ಯ ವ್ಯಕ್ತಿ/ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು)

7) ಪಾಸ್ ಪೋರ್ಟ ಸೈಜಿನ ಇತ್ತಿಚಿನ 3 ಭಾವ ಚಿತ್ರಗಳು

8) ಸ್ವ-ವಿಳಾಸವಿರುವ ರೂ. 15/- ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿದ 4x9 ಇಂಚು ಅಳತೆಯ 1 ಲಕೋಟೆಯನ್ನು ಅರ್ಜಿಯ ಜೊತೆಗೆ ಕಳುಹಿಸಬೇಕು.

9) ಆಧಾರ ಕಾರ್ಡ್ ನಕಲು ಪ್ರಮಾಣ ಪ್ರತಿಯನ್ನು ಲಗತ್ತಿಸಬೇಕು

10) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಖಾತೆ ಛಾಯಾ ಪ್ರತಿಯನ್ನು (ಝರಾಕ್ಸ್) ಲಗತ್ತಿಸಬೇಕು.

11) ಅಭ್ಯರ್ಥಿಗಳು ತರಬೇತಿ ಹೊಂದಿದ ಐ.ಟಿ.ಐ/ಐ.ಟಿ.ಸಿ ಸಂಸ್ಥೆಯ, ಎನ್.ಸಿ.ವಿ.ಟಿ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರದ ಪ್ರತಿ.

12) 371 (ಜೆ) ಕಾಯ್ದೆ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ನೀಡಿದ ಪ್ರಮಾಣ ಪತ್ರದ ಪ್ರತಿಯನ್ನು ತಪ್ಪದೆ ಲಗತ್ತಿಸುವದು.

13) ಕನ್ನಡ ಮಾಧ್ಯಮದ ಪ್ರಮಾಣ ಪತ್ರದ ಛಾಯಾ ಪ್ರತಿಯನ್ನು (ಝರಾಕ್ಸ್) ಲಗತ್ತಿಸಬೇಕು.

14) ಗ್ರಾಮೀಣ ಪ್ರದೇಶದ ಪ್ರಮಾಣ ಪತ್ರದ ಛಾಯಾ ಪ್ರತಿಯನ್ನು (ಝರಾಕ್ಸ್) ಲಗತ್ತಿಸಬೇಕು.

15) ಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿಗಳ ಪತ್ರದ ಛಾಯಾ ಪ್ರತಿಯನ್ನು (ಝರಾಕ್ಸ್) ಲಗತ್ತಿಸಬೇಕು.

16) ಈ ಮೇಲೆ ತಿಳಿಸಿರುವ ವಿವರಗಳು ಸತ್ಯವಿದೆ ಎಂದು ಪ್ರಮಾಣ ಮಾಡುತ್ತೇನೆ. ಒಂದು ವೇಳೆ ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಮೇಲೆ ಕಾನೂನು ಕ್ರಮ ಜರುಗಿಸಬಹುದೆಂದು ಒಪ್ಪುತ್ತೇನೆ.

ಸ್ಥಳ :

ಅರ್ಜಿದಾರರ ಸಹಿ

ದಿನಾಂಕ :